ಬಾಯಿಂದ ಒಂದು ಒಳ್ಳೆಯ ಮಾತು ಬಂದಿಲ್ಲ. ಅವರು ರೈತರ ಪರ ಎಂದು ಹೇಳುತ್ತಾರೆ, ಆ ರೀತಿ ಹೇಳುವುದಕ್ಕೆ ನಿಮಗೆ ಯಾವಹಕ್ಕಿದೆ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ. ವಿರೋಧಪಕ್ಷದ ನಾಯಕರಾಗಿ ಆ ಸಮಿತಿಯಲ್ಲಿ ಕೆಲಸ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡು ನಾನು ಇದನ್ನು ಪ್ರಸ್ತಾಪ ಮಾಡಲಿಲ್ಲ. ನಾನು ಕೇಳಿದ್ದುದು ವಿರೋಧಪಕ್ಷಗಳನ್ನು ಹೊರತುಪಡಿಸಿ, ಏಕೆ ಮಾಡಿದಿರಿ ಎಂದು.

(ಗೊಂದಲ)

(ಶ್ರೀ ವಾಟಾಳ್ ನಾಗರಾಜ್‌ರವರು ಪ್ರತಿಭಟನೆ ವ್ಯಕ್ತಮಾಡಿ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಈ ಸದನದ ಬಹು ಸದಸ್ಯರ ಇಚ್ಛೆ ಏನಿತ್ತು ಎಂದರೆ, ರೈತರ ಜ್ವಲಂತ ಸಮಸ್ಯೆಯನ್ನು ಸದನ ಚರ್ಚೆ ಮಾಡಬೇಕು ಮತ್ತು ಸರ್ಕಾರದ ವತಿಯಿಂದ ಕಂಪ್ರೆಹೆನ್ಸಿವ್ ಆಗಿ ಸಮಗ್ರವಾದ ಉತ್ತರ ಬರಬೇಕು ಉತ್ತರದ ಜೊತೆಗೆ ತೆಗೆದುಕೊಂಡಿರತಕ್ಕ ನಿರ್ಣಯಗಳು ಪ್ರಕಟವಾಗಬೇಕೆಂದು ಹೇಳಿ ಎಲ್ಲಾ ಕಡೆಯಿಂದಲೂ ಸದಿಚ್ಛೆಯನ್ನು ವ್ಯಕ್ತಪಡಿಸಿದ್ದಿರಿ, ಆ ಸದಿಚ್ಛೆ ನೆರವೇರಿದೆ ಎನ್ನುವ ಸಮಾಧಾನದಿಂದ ಈ ಸದನವನ್ನು ಮುಂದೂಡಿ ಮತ್ತೆ ಸದನ ಮೂರುಕಾಲು ಗಂಟೆಗೆ ಸೇರಲಾಗುವುದು.

ಸದನವು 2-15ಕ್ಕೆ ಮುಕ್ತಾಯವಾಗಿ, ಮತ್ತೆ 3-15ಕ್ಕೆ ಸೇರಲು ನಿಶ್ಚಯಿಸಿತು.

(ಸಭೆಯು 3-25 ಕ್ಕೆ ಪ್ರಾರಂಭವಾಯಿತು ಸಭೆಯು ಅಧ್ಯಕ್ಷತೆಯನ್ನು ಅಧ್ಯಕ್ಷರು ವಹಿಸಿದ್ದರು.)

ಶ್ರೀ ವಾಟಾಳ್ ನಾಗರಾಜ್: ಒಳಗಡೆ ನಿಂತಿರುವವರನ್ನು ಈ ಕಡೆ ಕರೆದುಕೊಳ್ಳುವುದಕ್ಕೆ ತಮ್ಮ ಸಹಕಾರ ಬೇಕು.

ಶ್ರೀ ಎಂ.ಎಸ್. ಪಾಟೀಲ್: ಒಳ್ಳೆಯ ಗಟ್ಟಿ ಮುಟ್ಟಾಗಿ ಬಂದಿದ್ದಾರೆ. ತಮ್ಮ ಪರವಾಗಿ ಮಾನ್ಯ ಯಡಿಯೂರಪ್ಪನವರನ್ನು ನಾನು ಕೇಳಿಕೊಳ್ಳುತ್ತೇನೆ ಕೊನೆಯ ದಿವಸ ಇವತ್ತು ಎಲ್ಲರೂ ಸಂತೋಷದಿಂದ ಹೋಗೋಣ. ತಮ್ಮ ಸ್ಥಾನಕ್ಕೆ ತಾವು ಹೋಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಒಂದು ವಿಚಾರವನ್ನು ಸರಕಾರದ ಗಮಕ್ಕೆ ತರಬೇಕೆಂದಿದ್ದೇನೆ.....

Ruling by the chair

ಅಧ್ಯಕ್ಷರು: ಒಂದು ರೂಲಿಂಗ್ ಇದೆ ಅದನ್ನು ನೀಡುತ್ತೇನೆ.

ಮಾನ್ಯ ಶ್ರೀ ನಜೀರ್ ಅಹಮದ್ ಅವರು ತಮ್ಮನ್ನು ಕುರಿತು "ಹೊಟ್ಟೆಪಾಡಿಗಾಗಿ ಕನ್ನಡದ ಬಗ್ಗೆ ಪ್ರಚಾರ ಮಾಡುತ್ತಿದ್ದೀರಿ" ಎಂದು ಸದನದಲ್ಲಿ ಹೇಳಿದ್ದರಿಂದ ನನ್ನ ಹಕ್ಕಿಗೆ ಚ್ಯುತಿಯಾಗಿದೆ ಎಂದು ಶ್ರೀ ವಾಟಾಳ್ ನಾಗರಾಜ್ ಅವರು ಆರೋಪಿಸಿ, 190ನೇ ನಿಯಮಾನುಸಾರ ಹಕ್ಕುಚ್ಯುತಿ ಸೂಚನೆ ನೀಡಿ, ಈ ವಿಚಾರವನ್ನು ಹಕ್ಕುಭಾದ್ಯತಾ ಸಮಿತಿಗೆ ಒಪ್ಪಿಸಬೇಕೆಂದು ಕೋರಿದ್ದಾರೆ.

ಜುಲೈ 16, 1990ರಂದು ಮಾನ್ಯ ಮುಖ್ಯಮಂತ್ರಿಯವರು ಅನುದಾನಗಳ ಬೇಡಿಕೆಗಳ ಚರ್ಚೆಗೆ ಉತ್ತರವಾಗಿ ಆಂಗ್ಲಭಾಷಾ ಶಾಲೆಗಳಿಗೆ ಮಾನ್ಯತೆ ನೀಡುವ ಸಂಬಂಧ ಸರ್ಕಾರದ ನೀತಿಯನ್ನು ಸಭೆಗೆ ನಿರೂಪಿಸುತ್ತಿದ್ದಾಗ ಮಾನ್ಯ ವಾಟಾಳ್ ನಾಗರಾಜ್ ಅವರು ಎತ್ತಿದ ಆಕ್ಷೇಪಣೆಗೆ ವಿರೋಧಪಕ್ಷಗಳು ಬೆಂಬಲಿಸಿದವು. ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಗೆ ಪ್ರತಿಭಟನೆ ವ್ಯಕ್ತಪಡಿಸುತ್ತಾ ವಿರೋಧಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು

ಸಭಾಧ್ಯಕ್ಷರ ಪೀಠದ ಮುಂಭಾಗದ ಆವರಣಕ್ಕೆ ಧಾವಿಸಿದರು. ಇದೇ ಸಮಯಕ್ಕೆ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಆವರಣಕ್ಕೆ ಧಾವಿಸಿ ಮಾತಿನ ಚಕಮಕಿಯಲ್ಲಿ ತೊಡಗಿದರು. ಸದನದ ಸುಸ್ಥಿತಿಯಲ್ಲಿಲ್ಲದಿದ್ದುದನ್ನು ಮನಗಂಡ ನಾನು ಸಭೆಯನ್ನು 15 ನಿಮಿಷ ಮುಂದೂಡಿದೆ. ತದನಂತರ ಸಂಬಂಧಪಟ್ಟ ಎಲ್ಲಾ ಮಾನ್ಯ ಸದಸ್ಯರುಗಳನ್ನು ನನ್ನ ಕೊಠಡಿಗೆ ಬರಮಾಡಿಕೊಂಡು ಅಂದಿನ ವಿವಾದಗ್ರಸ್ಥ ನಡವಳಿಕೆಗೆ ಕಾರಣವಾದ ಘಟನೆಯ ಬಗ್ಗೆ ಮಾತುಕತೆಯಾದನಂತರ ಒಂದು ತೀರ್ಮಾನಕ್ಕೆ ಬರಲಾಯಿತು. ಇದರಿಂದಾಗಿ ಮಾನ್ಯ ಶ್ರೀ ನಜೀರ್ ಅಹಮದ್ ಅವರಿಂದ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರ ಹಕ್ಕುಚ್ಯುತಿಯಾಗಿದೆ ಎನ್ನುವ ಪ್ರಶ್ನೆ ಲಪಕೃತವಾದಂತಾಯಿತು. ಒಂದು ವೇಳೆ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಇದರಿಂದ ತೃಪ್ತಿಯಾಗಿರದಿದ್ದಲ್ಲಿ ಅಂದೇ ಅವರು ಈ ಹಕ್ಕುಚ್ಯುತಿ ಸೂಚನೆಯನ್ನು ನೀಡಬಹುದಾಗಿತ್ತು. ಹೀಗೆ ಮಾಡದಿದ್ದುದರಿಂದ ನನ್ನ ಕೊಠಡಿಯಲ್ಲಾದ ತೀರ್ಮಾನಕ್ಕೆ ಅವರು ಬದ್ಧರೂ ಎಂದಾಂತಾಯಿತು. ಈ ಕಾರಣ ಶ್ರೀ ನಜೀರ್ ಅಹಮದ್ ಅವರ ಮೇಲೆ ಅವರು ನೀಡಿರುವ ಹಕ್ಕುಚ್ಯುತಿ ಸೂಚನೆ ಕ್ರಮಬದ್ಧವಲ್ಲ.

ಆದರೂ ಅಂದಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವರ ಸೂಚನೆಗೆ ಪರೋಕ್ಷ ಕಾರಣವಿರುವುದು ತಿಳಿಯುತ್ತದೆ. ಅಂದು ಸದನದಲ್ಲಿ ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿನ ಆವರಣದಲ್ಲಿ ಆಡಳಿತ ಹಾಗೂ ವಿರೋಧಪಕ್ಷಗಳ ಸದಸ್ಯರುಗಳ ಮಧ್ಯೆ ನಡೆಯಿತೆನ್ನಲಾದ ವಾದ ವಿವಾದಗಳು ಅಧಿಕೃತ ದಾಖಲೆಯಲ್ಲಿ ಇಲ್ಲದಿದ್ದರೂ ವೃತ್ತಪತ್ರಿಕೆಗಳು ವ್ಯಾಪಕವಾಗಿ ವರದಿಮಾಡಿವೆ, ಇದರಿಂದ ನೊಂದು ಈ ಹಕ್ಕುಚ್ಯುತಿ ಸೂಚನೆ ನೀಡಿರಬಹುದೆನ್ನುವುದು ನನ್ನ ಅನಿಸಿಕೆ.

ಅಂದರೆ ಸಭಾಧ್ಯಕ್ಷರ ಮುಂದಿನ ಆವರಣದಲ್ಲಿ ಸಂಭವಿಸುವ ಘಟನೆಗಳು ಆಡುವ ಮಾತುಗಳು ಕಲಾಪದ ಭಾಗವೇ ಆಗದಿರುವಾಗ ಪತ್ರಿಕೆಗಳು ವರದಿ ಮಾಡಬಹುದೆ, ಮಾಡಿದರೆ ಸಭೆ ನಿಂದರೆ ಅಥವಾ ಹಕ್ಕುಚ್ಯುತಿಯಾಗುವುದೇ ಎನ್ನುವ ಮೂಲಭೂತ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ.

ಈ ಮೂಲಭೂತ ಪ್ರಶ್ನೆಗೆ ಉತ್ತರ ನೀಡುವ ಮೊದಲು ನಮ್ಮ ವಿಧಾನಸಭಾ ಸದಸ್ಯರ ಆಯ್ಕೆಯ ಮೂಲ ವಿಧಾನಸಭೆಯ ರಚನೆ, ಅಲ್ಲಿ ನಡೆಯುವ ಕಾರ್ಯಕಲಾಪಗಳ ಸೂಕ್ಷ್ಮ ಪರಿಶೀಲನೆ ಅಗತ್ಯ. ತಮಗೆಲ್ಲಾ ವೇದ್ಯವಿರುವಂತೆ ನಮ್ಮನ್ನು ಚುನಾಯಿಸುವವರು ಮತದಾರರು. ಚುನಾಯಿತರಾದ ಮೇಲೆ ಈ ಸದನವನ್ನು ನಾವು ವಿಧಿವಿಹಿತವಾಗಿ ಸ್ಥಾಪಿಸುತ್ತೇವೆ. ಸದನದ ಗೌರವಾನ್ವಿತ ಸದಸ್ಯರಾಗಿ ಸರ್ಕಾರವನ್ನು ರಚಿಸಿ, ಆಡಳಿತದ ಹೊಣೆ ಹೊರುತ್ತೇವೆ. ಈ ಕಾರ್ಯಕ್ಕೆ ಪೂರಕವಾದ ಶಾಸನಗಳನ್ನು ಮತದಾರರ ಆದೇಶಾನುಸಾರ ರಚಿಸುತ್ತೇವೆ. ಇವುಗಳ ನೆರವಿನಿಂದ ರಾಜ್ಯದ ಕಾರ್ಯಭಾರ ನಡೆಸುತ್ತೇವೆ. ಇದೆಲ್ಲ ನಡೆಯುವುದು ಮತದಾರರ ಸಮ್ಮುಖದಲ್ಲೇ. ಸದನದಲ್ಲೂ ಪ್ರೇಕ್ಷಕರಾಗಿ ನಮ್ಮ ನಡವಳಿಕೆಯನ್ನು ಕಣ್ಣಾರೆ ಕಾಣುವ ಅವಕಾಶ ಅವರಿಗಿದೆ. ಈ ಅವಕಾಶವಿಲ್ಲದವರು ವೃತ್ತಪತ್ರಿಕೆಗಳ, ಬಾನುಲಿ, ದೂರದರ್ಶನ ಮೊದಲಾದ ಮಾಧ್ಯಮಗಳ ಮೂಲಕ ಇಲ್ಲಿನ ನಡವಳಿಕೆಗಳನ್ನು ಅರಿಯುವ ಅವಕಾಶಗಳು ವಿಪುಲವಾಗಿವೆ. ಈ ಮಾಧ್ಯಮ ಕೆಲವು ನಿಯಮ ನಿಬಂಧನೆಗೊಳಪಟ್ಟು ಕಾರ್ಯನಿರ್ವಹಿಸುವುದು ನಿಜ. ವರದಿಗಾರರು ಕಣ್ಣಾರೆ ಕಂಡರೂ ಕಿವಿಯಾರೆ ಕೇಳಿದರೂ ಸಭೆಯ ಅಧ್ಯಕ್ಷರು ಕಲಾಪದ ಕೆಲ ಭಾಗವನ್ನು ಅಧಿಕೃತ ದಾಖಲೆಗೆ ಸೇರದಂತೆ ಆದೇಶಿಸಿದರೆ, ಮಾಧ್ಯಮ ಹೀಗೆ ಅಧಿಕೃತವಾಗಿ ದಾಖಲಾಗದ್ದನ್ನು ಪ್ರಕಟಿಸುವಂತಿಲ್ಲ, ಪ್ರಸಾರ ಮಾಡುವಂತಿಲ್ಲ. ಆದರೆ ಆ ಸಭೆಯಲ್ಲಿದ್ದ ಸದಸ್ಯರೂ, ಪ್ರೇಕ್ಷಕರೂ, ಮಾಧ್ಯಮದ ಪ್ರತಿನಿಧಿಗಳು ಅಧಿಕಾರಿಗಳು ಅಧಿಕೃತ ದಾಖಲೆಯಿಂದ ಹೊರತುಪಡಿಸಿದ್ದರೂ ಕಂಡು ಕೇಳಿದ್ದನ್ನು ಉಳಿದವರು ಓದುವಂತಿಲ್ಲ, ಕೇಳುವಂತಿಲ್ಲ, ಕಾಣುವಂತಿಲ್ಲ, ಇದು ಉಚಿತವೇ? ಪ್ರಜಾತಂತ್ರದಲ್ಲಿ

ಎಲ್ಲರೂ ಸಮಾನರು, ಕೆಲವರು ಹೆಚ್ಚು ಸಮಾನರಿರುವುದು ಸಾಧ್ಯವಿಲ್ಲ. ಇದನ್ನು ಒಪ್ಪಿದರೆ ಸದನದಲ್ಲಿ ಹಾಜರಿದ್ದವರಂತೆಯೇ ಇತರರಿಗೂ ಅಲ್ಲಿ ಏನು ನಡೆಯಿತು ಎನ್ನುವುದನ್ನು ತಿಳಿಯುವ ಹಕ್ಕಿದೆಯಲ್ಲವೇ? ಈ ಪ್ರಶ್ನೆಗಳಿಗೆ ಕಾಲವೇ ಉತ್ತರಿಸಬೇಕಾಗಬಹುದು.

ಈ ಸಂದರ್ಭದಲ್ಲಿ ಇತ್ತೀಚೆಗೆ ವಿಶ್ವದಾದ್ಯಂತ ಅನೇಕ ರಾಷ್ಟ್ರಗಳಲ್ಲಿ ಅಲ್ಲಿನ ಸಂಸತ್ತು ಹಾಗೂ ಶಾಸನ ಸಭೆಗಳ ಕಲಾಪಗಳು ನೇರವಾಗಿ ದೂರದರ್ಶನ ಮೂಲಕ ಬಿತ್ತರವಾಗುತ್ತಿವೆ. ನಮ್ಮಂತಹ ರಾಷ್ಟ್ರಗಳಲ್ಲೂ ಈ ಕಾರ್ಯ ಆಗಬೇಕೆನ್ನುವ ಕೂಗು ಪ್ರಬಲವಾಗುತ್ತಿದೆ. ನಾನೂ ಸಹ ಈ ಬಗ್ಗೆ ಕೇಂದ್ರ ಸಮಾಚಾರ ಮತ್ತು ಪ್ರಸಾರ ಖಾತೆಯ ಸಚಿವರೊಡನೆ ಪತ್ರ ವ್ಯವಹಾರ ನಡೆಸಿದ್ದೇನೆ. ಇದು ಕಾರ್ಯಗತವಾಗುವ ದಿನಗಳು ದೂರವಿಲ್ಲ ಎನ್ನವುದು ನನ್ನ ಧೃಡ ನಂಬಿಕೆ. ಇದು ಸಾಧ್ಯವಾಗಿ ಸದನದ ಕಾರ್ಯಕಲಾಪಗಳು ನೇರವಾಗಿ ಬಿತ್ತರಗೊಳ್ಳುವಾಗ, ಅಧಿಕೃತವಾಗಿ ದಾಖಲಾಧವು ಅಥವಾ ದಾಖಲಾಗದವು ಎಂದಾಗಲಿ ಅಥವಾ ಇವು ಸಭಾಸದ್ಯಸರು ತಮ್ಮ ಜಾಗದಲ್ಲಿ ಆಡಿದ ಮಾತುಗಳು ಅವನ್ನು ಮಾತ್ರ ತೋರಿಸಬಹುದು. ಇವು ಬೇರೆಡೆಯಿಂದ ಆಡಿಬವು ಅವನ್ನು ತೋರಿಸಬಾರದು. ಅಂತೆಯೇ ಸಭಾಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ನಡೆದ ಯಾವ ಘಟನೆಗಳನ್ನು ತೋರಿಸಬಾರದು ಎಂದು ತೀರ್ಮಾನಿಸುವುದು ಸಾಧ್ಯವೇ? ಸಮಂಜಸವೇ? ಇದರಿಂದಾಗುವ ಪ್ರಯೋಜನವೇನು? ನಾವೆಲ್ಲಾ ಯೋಚಿಸಬೇಕು. ಇದರ ಬಗ್ಗೆ ಕಾಲ ಪಕ್ವವಾದಾಗ ಸೂಕ್ತ ಸಂಹಿತೆಯನ್ನು ರಚಿಸಬೇಕಾಗಬಹುದು.

ಪ್ರಪಂಚದ ಸಂಸತ್ತುಗಳಗೆಲ್ಲ ಮಾತೃ ಸದೃಶವಾದ, ಶಿಷ್ಟಾಚಾರ ಹಾಗೂ ಸಂಪ್ರದಾಯಕ್ಕೆ ಮತ್ತೊಂದು ಹೆಸರೇ ಆದ ಇಂಗ್ಲೆಂಡಿನ ಸಂಸತ್ತಿನ ಕಲಾಪಗಳೇ ದೂರದರ್ಶನದ ಮೂಲಕ ಬಿತ್ತರಗೊಳ್ಳುತ್ತಿದೆ. ಅಲ್ಲಿನ ಸಭಾಧ್ಯಕ್ಷ ಹಾಗೂ ಉಪಾಧ್ಯಕ್ಷರ ಪ್ರಕಾರ ನೇರ ಪ್ರಸಾರ ಪ್ರಾರಂಭವಾದ ನಂತರ ಸದನದಲ್ಲಿ ಶಿಸ್ತುಪಾಲನೆ ಉತ್ತಮಗೊಂಡಿದೆ, ಚರ್ಚೆಯ ಗುಣಮಟ್ಟ ಹೆಚ್ಚಿದೆ, ಆಡುವ ಮಾತುಗಳು ಲೆಕ್ಕಾಚಾರದಿಂದ ಕೂಡಿವೆ, ಅವರ ನಿಲುವು, ನಡವಳಿಕೆಗಳಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಅವರಲ್ಲಾದದ್ದು ನಮ್ಮಲ್ಲೂ ಆಗಬಹುದಲ್ಲಿವೇ? ಇದನ್ನು ನಾವು ಸ್ವಾಗತಿಸಬೇಡವೇ?

ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ 308ನೇ ನಿಯಮದ ಪ್ರಕಾರ ಸಭಾಧ್ಯಕ್ಷರು ಕರೆದಾಗ ಮಾತ್ರ ಮಾನ್ಯ ಸದಸ್ಯರು ಮಾತನಾಡಬೇಕು. ನಿಯಮಾವಳಿಗಳ 307 (7)ನೇ ನಿಯಮದ ಪ್ರಕಾರ ಮಾತನಾಡುವಾಗ ಸದಸ್ಯರು ತಮಗೆ ನಿಗಧಿಯಾದ ಸ್ಥಳದಲ್ಲೇ ಇರಬೇಕು. ಹೀಗಿಲ್ಲದೆ ಮಾಡುವ ಸದಸ್ಯರ ಭಾಷಣ ಸದನದ ದಾಖಲಾತಿಗಳ ಭಾಗವಾಗುವುದಿಲ್ಲ. ಈ ಬಗ್ಗೆ ಅನೇಕ ಬಾರಿ ಲೋಕಸಭೆಯಲ್ಲೂ, ನಮ್ಮ ಶಾಸನ ಸಭೆಯಲ್ಲೂ ಸ್ಪಷ್ಟವಾದ ಮಾತುಗಳಲ್ಲಿ ತೀರ್ಪು ನೀಡಲಾಗಿದೆ.

ಈ ಸಂಬಂಧ ಮಾರ್ಚ್, 19, 1982ರ ಮಾನ್ಯ ಲೋಕಸಭಾಧ್ಯಕ್ಷರ ಅಭಿಪ್ರಾಯ ಉಲ್ಲೇಖನಾರ್ಹ:

"ಸದಸ್ಯರಿಗೆ ನಾನು ಅನುಮತಿ ನೀಡಿದ ಹೊರತು ಅವರು ಮಾತನಾಡುವಂತಿಲ್ಲ. ಒಂದು ಪಕ್ಷ ಅವರು ಮಾತನಾಡಿದರೂ ಅದು ದಾಖಲಾತಿಗಳಲ್ಲಿ ಸೇರುವುದಿಲ್ಲ.

ಈ ಸದನದಲ್ಲೂ ಮಾರ್ಚ್ 5, 1988ರಂದು ಸಭಾಧ್ಯಕ್ಷರ ಮುಂಭಾಗದ ಆವರಣದಲ್ಲಿ ವಿರೋಧಪಕ್ಷದ ಕೆಲವು ಮಾನ್ಯ ಸದಸ್ಯರು ನಿಂತು ಮಾತನಾಡಿದಾಗ, ಅಂದಿನ ಸಭಾಧ್ಯಕ್ಷರು

"ನೀವು ನಿಮ್ಮ ಜಾಗಕ್ಕೆ ಹೋಗಿ ಮಾತನಾಡಿ, ನೀವು ಇಲ್ಲಿ ನಿಂತು ಏನೂ ಮಾತನಾಡಿದರೂ ದಾಖಲಾಗುದಿಲ್ಲ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಪಡಿಸಿದ್ದಾರೆ"

(ಪುಟ 115, ಸಂ.111-ವಿ.ಸ. ನಡವಳಿಕೆಗಳು)

ಈ ಅಭಿಪ್ರಾಯಗಳ ಹಿನ್ನಲೆಯಲ್ಲಿ ನೋಡಿದಾಗ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಮಾನ್ಯ ಸದಸ್ಯರುಗಳ ನಡುವೆ ಸಭಾಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ನಡೆದ ಮಾತುಕತೆ ದಾಖಲಾತಿಗಳ ಭಾಗವಾಗುದಿಲ್ಲ, ಆದಕಾರಣ, ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರ ಸೂಚನೆ ಹಕ್ಕುಚ್ಯತಿಯಾಗುದಿಲ್ಲ.

ಸದನದ ನಡವಳಿಕೆ ಸಂಬಂಧಿಸಿದ ವಿಚಾರಗಳನ್ನು ವರದಿ ಮಾಡುವಾಗ ಮಾಧ್ಯಮದ ಪ್ರತಿನಿಧಿಗಳು ಜಾಗರೂಕರಾಗಿರಬೇಕು. ತಮ್ಮ ಚಾತುರ್ಯವನ್ನು ನಿಗದಿತ ಚೌಕಟ್ಟಿನೊಳಗೇ ಪ್ರದರ್ಶಿಸಬೇಕು. ಯಾವದೇ ಕಾರಣಕ್ಕೂ ಮೇರೆ ಮೀರಬಾರದು, ಮೀರಿದರೆ ಸದನದ ಅವಕೈಪೆಗೆ ಪಾತ್ರರಾಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಬಹು ದಿವಸಗಳ ನಂತರದ ತೀರ್ಪು ಬಂತು. ಇದು ಕೊನೆಯ ತೀರ್ಪೆ ಹಾಗೆ ಎಂದು ನಮಗೆ ಅನ್ನಿಸುತ್ತದೆ. ಈ ತೀರ್ಪನ್ನು ಕೊಡಬೇಕಾದರೆ ತಮ್ಮ ತೀರ್ಪನ್ನು ಪ್ರಶ್ನೆ ಮಾಡುವುದಕ್ಕೆ ನಮಗೆ ಹಕ್ಕು ಇಲ್ಲ. ಇವತ್ತು ಈ ತೀರ್ಪನ್ನು ಕೊಡೋಣ ಎಲ್ಲಾ ಕೆಲಸಕಾರ್ಯಗಳನ್ನು ಇವತ್ತು ಮುಗಿಸೋಣವೆನ್ನುವ ನಿರ್ಧಾರಕ್ಕೆ ತಾವೇನಾದರೂ ಬಂದಿದ್ದೀರಾ?

ಅಧ್ಯಕ್ಷರು: ಯಾವುದನ್ನು ಪೆಂಡಿಂಗ್ ಇಟ್ಟುಕೊಳ್ಳಬಾರದೆನ್ನುವ ಉದ್ದೇಶದಿಂದ ತೀರ್ಪು ಕೊಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ತಮ್ಮಂತಹ ಅಧ್ಯಕ್ಷರನ್ನು ಪಡೆದದ್ದು ನಮ್ಮ ಸೌಭಾಗ್ಯ. ಮುಂದೆಯೂ ಸಹ ತಾವು ಅಧ್ಯಕ್ಷರಾಗಿ ಬರಬೇಕು ಎಂದು ಈ ಮನೆಯ ಅಪೇಕ್ಷೆ.

ತಾವು ತಮ್ಮನ್ನು ಬಿಟ್ಟು ಹೋಗಬೇಕು ಎನ್ನತಕ್ಕಂಥ ಯೋಚನೆ ಏನಾದರೂ ಮಾಡಿದ್ದೀರಾ ಎನ್ನತಕ್ಕಂಥ ಮನೋವ್ಯಥೆ ನಮ್ಮನ್ನು ಕಾಡುತ್ತಾ ಇದೆ.

ನಗರದಲ್ಲಿ ಹಾಲಿನ ಕೊರತೆ ಹಾಗೂ ಹಾಲಿನ ಬೆಲೆಯನ್ನು ಹೆಚ್ಚು ಮಾಡುವ ಬಗ್ಗೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್ ಅವರು ಈಗ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅವರ ಜೊತೆಯಲ್ಲಿ ನಾನು ಸಹಿತ ಧ್ವನಿಗೂಡಿಸುತ್ತೇನೆ. ಅವರ ಅಭಿಪ್ರಾಯವನ್ನು ನಾನು ಸಹಿತ ಅಭಿಮಾನದಿಂದ ಒಪ್ಪುತ್ತೇನೆ. ಈಗ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ ಬೆಳಿಗ್ಗೆ ಬಯಸಿದ್ದೆ. ಮಾನ್ಯ ಸಚಿವರು ದಯವಿಟ್ಟು ಇದರ ಬಗ್ಗೆ ತಕ್ಷಣ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಹಾಲಿನ ಕೊರತೆ ಇದೆಯೆಂದು ಹೇಳಿ, ಅದಕ್ಕೋಸ್ಕರ ನಾವು ಬೆಲೆ ಜಾಸ್ತಿ ಮಾಡಬೇಕೆಂದು ಮಾಡಿದಾಗ ಅದನ್ನು ನಾನು ಸ್ವಾಗತ ಮಾಡಿದ್ದೆವು. ಏಕೆಂದರೆ ರೈತರಿಗೆ ಅನುಕೂಲವಾಗುತ್ತದೆ ಮತ್ತು ಅವರು ಬಳಸತಕ್ಕಂಥ ಹಿಂಡಿ, ಬೂಸಾ, ಮತ್ತೊಂದೆಲ್ಲ , ಜಾಸ್ತಿಯಾಗಿದ್ದರಿಂದ ನೀವು ಮಾಡಬೇಕೆಂದು ರೈತರ ಪರವಾಗಿ ಕೇಳಿಕೊಂಡಿದ್ದೆವು. ಆ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಹೇಳಿಕೆ ಕೊಟ್ಟ ಮಂತ್ರಿಗಳು ಹಾಲಿನ ಕೊರತೆ ಇದೆಯೆಂದು ಹೇಳಿದ್ದರು. ಈಗ ಏನಾಗಿದೆ ಎಂದರೆ, ಇದನ್ನು ತಿಳಿದುಕೊಂಡು ನೀಲ್‌ಗಿರೀಸ್ ಅಂಥ ದೊಡ್ಡದೊಡ್ಡ ಡೈರಿಗಳು ಇವರೆಲ್ಲಾ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿಬಿಟ್ಟಿದ್ದಾರೆ. ಬೆಂಗಳೂರು ಡೈರಿಯಲ್ಲಿ ಸರ್ಕಾರ ಕೊಡತಕ್ಕಂಥ ಸಂಬಳ, ಎಲ್ಲಾ ಕೊಟ್ಟು, ಓವರ್ ಹೆಡ್ ಚಾರ್ಜಸ್ ಕಳೆದು ಐದೂವರೆ ರೂಪಾಯಿ ಒಂದು ಲೀಟರ್‌ಗೆ ಇದೆ. ಆದರೆ ಅವರು ಏಳು-ಏಳೂವರೆ ರೂಪಾಯಿಗೆ ಹಾಲು ಮಾರಾಟ ಮಾಡುತ್ತಿದ್ದಾರೆ. ಮತ್ತೆ ಜನರು ಯಾರಾದರೂ ಅವರ ಹತ್ತಿರ ಹೋದರೆ ಬಹಳ ಕೆಟ್ಟದಾಗಿ ನಡೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮುಖ್ಯವಾಗಿ ನಾನು ಕೇಳತಕ್ಕದ್ದು ಏನೆಂದರೆ, ಪ್ರತಿದಿನ ಬೆಂಗಳೂರಿನಿಂದ ಕಲ್ಕತ್ತಾಗೆ ಕೆ.ಎಂ.ಎಫ್.ನಿಂದ